ಅಲ್ಲಿಯ ವಿದ್ಯಾಸಂಸ್ಥೆಗಳವರು, ಕಾರ್ಖಾನೆಗಳವರು ಮುಂದು ಬಂದರೆ ಅಲ್ಲಿಯೂ ಕೂಡ ಇಂಥ ಕಾರ್ಯಕ್ರಮವನ್ನು ಪ್ರಾರಂಭ ಮಾಡಬಹುದಾಗಿದೆ.

ಸಂಚಾರಿ ಪಶು ಚಿಕಿತ್ಸಾ ವಾಹನಗಳ ವ್ಯವಸ್ಥೆ

3588 - ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಸಂಚಾರಿ ಪಶುಚಿಕಿತ್ಸ ವಾಹನಗಳ ವ್ಯವಸ್ಥೆ ಇದೆಯೇ? ಇಲ್ಲದ ತಾಲ್ಲೂಕಿನಲ್ಲಿ ಈ ವ್ಯವಸ್ಥೆ ನೀಡುವ ಆಲೋಚನೆ ಸರ್ಕಾರದ ಗಮನದಲ್ಲಿದೆಯೇ.*

ಆ) *ರಾಜ್ಯದ ಎಲ್ಲ ಪಶುಸಂಗೋಪನಾ ಘಟಕಗಳಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ಸ್, ಕಾಂಪೌಂಡರ್ಸ್, ಜವಾನರು ಇವ್ದಾರೆಯೆ, ಇಲ್ಲದ ಘಟಕಗಳಿಗೆ ಶೀಘ್ರವಾಗಿ ನೇಮಕ ಮಾಡುವ ವ್ಯವಸ್ಥೆ ನಡೆದಿದೆಯೇ.*

ಇ) *ರಾಜ್ಯದ ಪಶುಸಂಗೋಪನಾ ಇಲಾಖೆಯ ಎಲ್ಲಾ ವಾಹನಗಳಿಗೂ ಚಾಲಕರಿವ್ದಾರೆಯೇ, ಚಾಲಕರಿಲ್ಲದೆ ತಾಲ್ಲೂಕಿನ ಎಷ್ಟು ಸಂಚಾರಿ ವಾಹನಗಳು ನಿಂತಿವೆ, ಇದಕ್ಕೆ ಶೀಘ್ರ ವ್ಯವಸ್ಥೆ ಮಾಡಲಾಗುವುದೇ?*

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ, ಪಶುವೈದ್ಯ ಸೇವಾ ಸಚಿವರು)

ಅ) ಇಲ್ಲ. ಹೌದು.

ಆ) ಇಲ್ಲ. ಹೌದು.

ಇ) 1. ಇಲ್ಲ.
2. 58
3. ಹೌದು.

ಶ್ರೀಮತಿ ಮಲ್ಲಾಜಮ್ಮ : ಮಾನ್ಯ ಅಧ್ಯಕ್ಷರೆ, ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿ ಸಂಚಾರಿ ಪಶುಚಿಕಿತ್ಸಾಲಯದ ವಾಹನಗಳ ವ್ಯವಸ್ಥೆ ಇದೆಯೇ? ಇಲ್ಲವಾದಲ್ಲಿ ಪ್ರತಿ ತಾಲ್ಲೂಕುಗಳಲ್ಲಿಯೂ ಇದನ್ನು ಮಾಡಲು ಸರಕಾರದವರು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಎಷ್ಟು ಕಡೆಗಳಲ್ಲಿ ಈ ಸಂಚಾರಿ ವಾಹನಗಳನ್ನು ಪ್ರಾರಂಭ ಮಾಡುತ್ತೀರಿ? ಮತ್ತು ರಾಜ್ಯದಲ್ಲಿ ಎಷ್ಟು ಪಶುಸಂಗೋಪನ ಘಟಕಗಳಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ಸ್, ಕಾಂಪೌಂಡರ್ಸ್, ಜವಾನರು ಇದ್ದಾರೆ? ಹಾಗೆ ಸೂಕ್ತ ಸಿಬ್ಬಂದಿ ಇಲ್ಲದ ಘಟಕಗಳಿಗೆ ಶೀಘ್ರವಾಗಿ ನೇಮಕ ಮಾಡುವ ವ್ಯವಸ್ಥೆ ಸರಕಾರದಲ್ಲಿ ಇದೆಯೇ ಎಂದು ಕೇಳಿದ್ದೇನೆ.

ಅದಕ್ಕೆ ತಾವು ಇಲ್ಲವೆಂದು ಹೇಳಿದ್ದೀರಿ ಮತ್ತು ಶೀಘ್ರವಾಗಿ ನೇಮಕ ಮಾಡುವ ವ್ಯವಸ್ಥೆ ಇದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದಿದ್ದೀರಿ. ಎಷ್ಟು ಘಟಕಗಳಲ್ಲಿ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ನಾನು ಕೇಳುತ್ತೇನೆ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಅನೇಕ ಪಶುಸಂಗೋಪನಾ ಶಾಲೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆಯೋ ಅವನ್ನು ಭರ್ತಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ : ಅಧ್ಯಕ್ಷರೇ, ಸದಸ್ಯರ ಪ್ರಶ್ನೆಗೆ ನಮ್ಮಲ್ಲಿ ಪಶು ಚಿಕಿತ್ಸಾ ವಾಹನಗಳಿವೆ, 175 ತಾಲೂಕುಗಳಲ್ಲಿ 163 ಪಶುಚಿಕಿತ್ಸ ಘಟಕಗಳಿವೆ ಕಾರವಾರ ಜಿಲ್ಲೆ ಹೊನ್ನಾವರ ತಾಲೂಕಿನಲ್ಲಿ ಜಲವಾಹಿನಿ ಸಂಚಾರ ಒಂದಿದೆ. ಹೀಗಾಗಿ 175ರಲ್ಲಿ 164ರಲ್ಲಿದೆ ಇನ್ನೂ 11 ತಾಲೂಕುಗಳಲ್ಲಿ ಪಶುಚಿಕಿತ್ಸ ಸೌಕರ್ಯಗಳಿಲ್ಲ. ಅದನ್ನು ಸರ್ಕಾರ

ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಪ್ರಯತ್ನ ಮಾಡುವುದು. ಆಮೇಲೆ ಮಂಡ್ಯ ಜಿಲ್ಲೆಯಲ್ಲಿ ತಮ್ಮ ಕ್ಷೇತ್ರ ಮಳವಳ್ಳಿ ತಾಲ್ಲೂಕು ಸೇರಿದಂತೆ ಐದು ಸಂಚಾರಿ ಪಶು ಚಿಕಿತ್ಸೆಗಳ ಹುದ್ದೆ ಖಾಲಿ ಇವೆ. ನಮಗೆ ತೊಂದರೆ ಬಂದಿದ್ದು ಹಣಕಾಸಿನದು ಆದಷ್ಟು ಬೇಗನೆ ಫೈನಾನ್ಸ್ ಇಲಾಖೆಯಿಂದ ಮಂಜೂರು ಪಡೆದು ಮಂಡ್ಯ ಜಿಲ್ಲೆಗಷ್ಟೇ ಅಲ್ಲ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಖಾಲಿ ಇರತಕ್ಕ ನಾನಾ ಹುದ್ದೆಗಳನ್ನು ಭರ್ತಿ ಮಾಡಲು ಪ್ರಯತ್ನಪಡುತ್ತೇನೆ.

ಯುವಕರೈತ ಸಮಾಜದ ಬಗ್ಗೆ

3597 - ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಕರ್ನಾಟಕ ಪ್ರದೇಶ ಯುವಕ ರೈತ ಸಮಾಜವು ನೊಂದಣಿಯಾಗಿದೆಯೇ?

ಆ) ಮೇಲ್ಕಂಡ ಸಂಘವನ್ನು ನಡೆಸಲು ಸರ್ಕಾರದಿಂದ ಕಟ್ಟಡವನ್ನೇನಾದರೂ ನೀಡಲಾಗಿದೆಯೇ?

ಇ) ಸದರಿ ಸಮಿತಿಯಲ್ಲಿರುವ ವ್ಯಕ್ತಿಗಳ ವಿಳಾಸಗಳನ್ನು ಒಳಗೊಂಡ ವಿವರಗಳನ್ನೊದಗಿಸುವುದು.

ಈ) ಈ ಸಮಾಜದ ಮಾಸಿಕ ಸಭೆಗಳು ಮತ್ತು ಮಹಾಸಭೆಗಳು ಸಕಾಲದಲ್ಲಿ ನಡೆಯುತ್ತಿವೆಯೇ ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಉ) ಸರ್ಕಾರದಿಂದ ಈ ಸಮಾಜಕ್ಕೆ ಗ್ರಾಂಟ್ ದೊರೆಕುತ್ತಿದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಆಗಿದೆ.

ಆ) ಇಲ್ಲ.

ಇ) ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು : ಅಧ್ಯಕ್ಷರು : ಮಾನ್ಯ ಕೃಷಿ ಸಚಿವರು ಕಾರ್ಯಾಧ್ಯಕ್ಷರು : ಖಾಲಿಯಿದೆ.

ಉಪಾಧ್ಯಕ್ಷರು : ಶ್ರೀ ಟಿ. ತಿಪ್ಪೇರುದ್ರಯ್ಯನವರು ಆಲೂರು ಅಂಚೆ, ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ.

ಗೌ :ಕಾರ್ಯದರ್ಶಿ : ಶ್ರೀ ಆರ್. ತಿಮ್ಮರೆಡ್ಡಿ, ಚಂದಾಪುರ ಅಂಚೆ, ಅನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಖಜಾಂಚಿಗಳು : ಶ್ರೀ ಸಿ.ಯಂ. ಲಿಂಗಪ್ಪನವರು ಶಾಸನ ಸಭಾ ಸದಸ್ಯರು, ಇಟ್ಟುಮಡು ಅಂಚೆ ರಾಮನಗರ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಈ) ನಡೆಯುತ್ತಿಲ್ಲ.

ಕಾರಣಗಳು :

1) ಹೊಸದಾಗಿ ಯುವಜನ ಇಲಾಖೆ ಅಸ್ತಿತ್ವಕ್ಕೆ ಬಂದು ಸಮಾಜಕ್ಕೆ ದೊರೆಯುತ್ತಿದ್ದ ಪ್ರತ್ಯೆಕ್ಷ ಹಾಗೂ ಪರೋಕ್ಷ ಪ್ರೋತ್ಸಾಹಗಳು ನಿಂತಿದ್ದು.
2) ಸದಸ್ಯತ್ವ ನೊಂದಾವಣೆಯಾಗಲೀ ಅಥವಾ ನವೀಕರಣವಾಗಲೀ ಆಗದೇ ನಿಂತುಹೋದದ್ದು.
3) ಆರ್ಥಿಕ ಮುಗ್ಗಟ್ಟು.
4) ಕಟ್ಟಡ ಇಲ್ಲದಿರುವುದು.